ಆಲಮಟ್ಟಿ ಜಲಾಶಯದ ಏತ ನೀರಾವರಿ ಯೋಜನೆಗಳು:

84 (185) ಶ್ರೀ ಪಾಟೀಲ್ ಜೆ.ಟಿ. (ಬೀಳಗಿ): ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಆಲಮಟ್ಟಿ ಜಲಾಶಯದಲ್ಲಿ ಸ್ಕೀಮ್-ಬಿ ದಲ್ಲಿ ಬರತಕ್ಕಂಥ ನೀರಾವರಿ ಯೋಜನೆಗಳನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು;

2) ಹೆರಕಲ್ಲ ಏತ ನೀರಾವರಿ ಯೋಜನೆ ಸ್ಕೀಮ್-ಬಿ ದಲ್ಲಿ ಇದ್ದು ಬೀಳಗಿ ಕ್ಷೇತ್ರದ 65 ಹಳ್ಳಿಗಳಲ್ಲಿ 53 ಹಳ್ಳಿಗಳು ಮುಳುಗಡೆಯಾಗಲಿದ್ದು, ಬಾಕಿ ಉಳಿದ ಜಮೀನುಗಳಿಗೆ ನೀರಾವರಿ ಮಾಡಿಕೊಟ್ಟಲ್ಲಿ ಸಂತ್ರಸ್ತ ತಾಲ್ಲೂಕಿಗೆ ಭಾರೀ ಸಹಾಯವಾಗುವುದರಿಂದ ಇದನ್ನು ಸ್ಕೀಮ್-ಎದಲ್ಲಿ ತೆಗೆದುಕೊಳ್ಳಲು ಸರ್ಕಾರ ಏನಾದರೂ ತೀರ್ಮಾನ ತೆಗೆದುಕೊಳ್ಳುವುದೇ;

3) ಆಲಮಟ್ಟಿ ಜಲಾಶಯದಲ್ಲಿ ಸ್ಕೀಮ್-ಎ ದಲ್ಲಿ ಮುಳವಾಡ ಏತ ನೀರಾವರಿ ಯೋಜನೆಯಲ್ಲಿ ಬರತಕ್ಕಂಥ ಜಮೀನುಗಳಿಗೆ ನೀರನ್ನು ಯಾವಾಗ ಒದಗಿಸಲಾಗುವುದು;

4) ಈ ಬಗ್ಗೆ ಕಾಲುವೆಗಳ ಟೆಂಡರ್ ಕರೆಯಲಾಗಿದೆಯೇ; ಹಾಗಿದ್ದಲ್ಲಿ ಎಲ್ಲಿಯವರೆಗೆ ಕರೆಯಲಾಗಿದೆ;

5) ಸದರಿ ಕಾಲುವೆಗಳ ಕೆಲಸ ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಕೆ.ಹೆಚ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

1) ಈ ಪ್ರಸ್ತಾವನೆಯು ಇನ್ನೂ ಪರಿಶೀಲನೆಯಲ್ಲಿದೆ.

2) ಹೆರಕಲ್ ಏತ ನೀರಾವರಿ ಯೋಜನೆ ಸ್ಕೀಮ್-ಬಿ ನಲ್ಲಿ ಪ್ರಸ್ತಾಪಿಸಲಾಗಿದೆ. ಈಗಾಗಲೇ ಸ್ಕೀಮ್-ಎ ಗೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದರಿಂದ ಇದನ್ನು ಸ್ಕೀಮ್-ಎ ಯಲ್ಲಿ ಕೈಗೊಳ್ಳಲು ಸಾಧ್ಯವಿಲ್ಲ.

3) ಸ್ಕೀಮ್-ಎ ಅಡಿಯಲ್ಲಿ ಬರುವ ಮುಳವಾಡ ಏತ ನೀರಾವರಿ ಯೋಜನೆಯ ಕೆಲಸಗಳನ್ನು ಡಿಸೆಂಬರ್ 2002ರಲ್ಲಿ ಪೂರ್ಣಗೊಳ್ಳಲು ಯೋಜಿಸಲಾಗಿದೆ. ನಂತರ ಸದರಿ ಏತ ನೀರಾವರಿ ಯೋಜನೆಯಡಿಯಲ್ಲಿ ಬರುವ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗುವುದು.

4) ಲೀಡ್ ಆಫ್ ಕಾಲುವೆಯ ಕಾಮಗಾರಿಯು ಈಗ ಮುಕ್ತಾಯ ಹಂತದಲ್ಲಿದೆ. ಪೂರ್ವ ಕಾಲುವೆ ಕಿ.ಮೀ. 0.00 ದಿಂದ 10.00ರವರೆಗೆ ಗುತ್ತಿಗೆ ಆಧಾರದ ಮೇಲೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. 10.00 ರಿಂದ 17.00ರ ವರೆಗಿನ ಕಾಮಗಾರಿಗೆ ಟೆಂಡರ್ ಸ್ವೀಕರಿಸಲಾಗಿದ್ದು, ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ.

5) ಮುಳವಾಡ ಏತ ನೀರಾವರಿಯ ಇನ್ನುಳಿದ ಕಾಮಗಾರಿಯಾದ 85.00 ಕಿ.ಮೀ. ನ ಪಶ್ಚಿಮ ಕಾಲುವೆಯ ಸರ್ವೆ ಕಾರ್ಯ ಮುಗಿದಿದ್ದು, ಅಂದಾಜುಗಳನ್ನು ತಯಾರಿಸಲಾಗುತ್ತಿದೆ. ಕಾಮಗಾರಿಯನ್ನು ಶೀಘ್ರವಾಗಿ ಪ್ರಾರಂಭಿಸಲಾಗುವುದು.